ಓ.ಎಸ್.ನಂ.63/2019
ಪಿ.ಡಬ್ಲ್ಯೂ-03

**ಸಾಕ್ಷಿಯನ್ನು ದಿಃ 01.07.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ಪರ ಶ್ರೀ ಕೆ.ಹೆಚ್.ಆರ್. ವಕೀಲರಿಂದ.**

ನಾನು ವೃತ್ತಿಯಿಂದ ವಕೀಲನಾಗಿರುತ್ತೇನೆ. ಯಾವುದಾದರೂ ದಾಖಲೆ ನೋಡಿದಲ್ಲಿ ಅದರ ಹಕ್ಕು ಮತ್ತು ಅಧಿಕಾರ ಯಾರಿಗೆ ಸಂಬಂಧಿಸಿರುತ್ತದೆಂದು ನಾನು ವಕೀಲನಾಗಿರುವ ಕಾರಣ ಹೇಳಬಲ್ಲೆ ಎಂದು ಹೇಳುತ್ತಾರೆ. ನಿ.ಪಿ 1 ಕರಾರು ಪತ್ರ ತಯಾರು ಮಾಡುವ ಮೊದಲು ಪಹಣಿ ಪತ್ರಿಕೆ, ಎಂ. ಆರ್ ಮತ್ತು ಸಾಗುವಳಿ ಚೀಟಿಯನ್ನು ನೋಡಿರುತ್ತೇನೆ. ಸದರಿ ಸ್ವತ್ತಿನ ಪಹಣಿ ಪತ್ರಿಕೆ ಯಾರ ಹೆಸರಿಗೆ ಇತ್ತು ಎಂದರೆ ಸಾಕ್ಷಿ ದಾಖಲೆ ನೋಡಿ ಹೇಳಬಲ್ಲೇ ಎಂದು ಹೇಳುತ್ತಾರೆ. ಕರಾರು ಪತ್ರಕ್ಕೆ ಆಗುವ ಸಮಯಕ್ಕೆ ಸಾಗುವಳಿ ಚೀಟಿ ಗಿರಿಯಮ್ಮ ಅವರ ಹೆಸರಿಗೆ ಇದ್ದು ಪಹಣಿ ಪತ್ರಿಕೆ ಲಕ್ಕಮ್ಮ ಅವರ ಹೆಸರಿಗೆ ಇತ್ತು ಎಂದು ಹೇಳುತ್ತಾರೆ.

ಪೌವತಿ ವಾರಸ್ಸು ಆಧಾರದ ಮೇರೆಗೆ ಲಕ್ಕಮ್ಮ ಅವರ ಹೆಸರಿಗೆ ಎಂ.ಆರ್ ಆಗಿರುತ್ತದೆಂದು ಹೇಳುತ್ತಾರೆ. ಕರಾರು ಪತ್ರ ತಯಾರು ಮಾಡುವ ಮೊದಲು ಪ್ರತಿವಾದಿ 1 ಅವರಿಗೆ ಅವರ ಸಹೋದರ ಸಹೋದರಿಯರು ಇದ್ದ ಬಗ್ಗೆ ಕೇಳಲಾಗಿ ಇಲ್ಲವೆಂದು ಹೇಳುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಲಕ್ಕಮ್ಮ ಅವರನ್ನು ಹೊರತು ಪಡಿಸಿ ಬೇರೆ ಯಾರಿಗೂ ಹಕ್ಕು ಅಧಿಕಾರ ಇರುವುದಿಲ್ಲ. ಪತ್ರ ಬರೆಯುವ ಸಮಯದಲ್ಲಿ ಪ್ರತಿವಾದಿ 1 ಅವರಿಗೆ ಓದಲು ಬರೆಯಲು ಬರುತ್ತದೆಯಾ ಎಂದು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿ ಅವರು ಓದಿಲ್ಲವೆಂದು ಹೇಳುತ್ತಾರೆ.

ದಾವಾ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಪ್ರತಿವಾದಿ 1 ಅವರಿಗೆ ಮಾತ್ರ ಇರುತ್ತದೆ ಎಂದರೆ ಸರಿ. ಪ್ರತಿವಾದಿ 2 ಮತ್ತು 3 ಅವರ ಹೆಸರನ್ನು ಕರಾರು ಪತ್ರದಲ್ಲಿ ಸೇರಿಸಲು ವಾದಿ ಮತ್ತು ಪ್ರತಿವಾದಿ 1 ಅವರು ಹೇಳಿರುತ್ತಾರೆ. ಪ್ರತಿವಾದಿ 1 ಅವರು ಅನಕ್ಷರಸ್ಥರಾಗಿದ್ದು ವಾದಿ ಮತ್ತು ಪ್ರತಿವಾದಿ 2 ಮತ್ತು 3 ಅವರ ಮಾತು ಕೇಳಿ ಅವರ ಹೆಸರನ್ನು ಸೇರಿಸಿದ್ದು ಈ ಬಗ್ಗೆ ಪ್ರತಿವಾದಿ 1 ಅವರಿಗೆ ಗೊತ್ತಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3 ಅವರನ್ನು ಹೊರತು ಪಡಿಸಿ ಪ್ರತಿವಾದಿ 1 ಅವರೇ ಕ್ರಯದ ಕರಾರು ಪತ್ರವನ್ನು ಬರೆದುಕೊಡಲು ಶಕ್ತ ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತನ್ನು ಪ್ರತಿವಾದಿ 1 ಅವರಿಗೆ ಮಾತ್ರ ಅದನ್ನು ಮಾರಾಟ ಮಾಡುವ ಹಕ್ಕು ಅಧಿಕಾರ ಇದ್ದು ವಾದಿ ಮತ್ತು ಪ್ರತಿವಾದಿ 2 ಹಾಗೂ 3 ಅವರ ಮಾತು ಕೇಳಿ ಕರಾರು ಪತ್ರದ ಬಾಕಿ ಹಣವನ್ನು ಪ್ರತಿವಾದಿ 2 ಮತ್ತು 3 ಅವರಿಗೆ ಕೊಡಿಸುವ ಉದ್ದೇಶದಿಂದ ದಾಖಲೆಯಲ್ಲಿ ಅವರ ಹೆಸರು ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 1 ಅವರಿಗೆ ಮೋಸ ಮಾಡುವ ಉದ್ದೇಶದಿಂದ ಪ್ರತಿವಾದಿ 2 ಮತ್ತು 3 ಅವರ ಹೆಸರನ್ನು ಕರಾರು ಪತ್ರದಲ್ಲಿ ಸೇರಿಸಿದ್ದು ಸದರಿ ವಿಷಯ ಪ್ರತಿವಾದಿ 1 ಅವರಿಗೆ ಕ್ರಯದ ಕರಾರು ನೋಟಿಸ್ ಬಂದಾಗಲೇ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾತ್ರ ದಾವಾ ಸ್ವತ್ತನ್ನು ಕ್ರಯ ಮಾಡುವ ಹಕ್ಕು ಇದ್ದು ಅದಕ್ಕೆ ಸಂಬಂಧಿಸಿದ ಹಣವನ್ನು ಪಡೆಯುವ ಹಕ್ಕುನ್ನು ಸಹ ಅವರೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 3 ಅವರಿಗೆ ಪ್ರತಿವಾದಿ 1 ಅವರ ಜೀವತ ಕಾಲದಲ್ಲಿ ದಾವಾ ಸ್ವತ್ತನ್ನು ಮಾರಾಟ ಮಾಡುವ, ಬಾಗಾಂಶದ ಮತ್ತು ಮಾಲಿಕತ್ವದ ಹಕ್ಕು ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.